REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 09 । ಜೂನ್ 7, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ಸಿಬಿಲ್ ಸ್ಕೋರ್ ಆಧಾರದಲ್ಲಿ ಶಿಕ್ಷಣ ಸಾಲ ನಿರಾಕರಿಸುವಂತಿಲ್ಲ : ಹೈಕೋರ್ಟ್



**ಕೊಚ್ಚಿ :** ಬ್ಯಾಂಕಿನಿಂದ ನಾವು ಶಿಕ್ಷಣ ಸಾಲ ಅಥವಾ ಯಾವುದೇ ಸಾಲವನ್ನು ಪಡೆಯುವುದಾದರೂ ಕೂಡಾ ಸಿಬಿಲ್ ಸ್ಕೋರ್ ಅತೀ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಉತ್ತಮ ಸಿಬಿಲ್ ಸ್ಕೋರ್ ಇದ್ದರೆ ಮಾತ್ರ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಪಡೆಯಲು ಸಾಧ್ಯವಾಗುತ್ತದೆ. ಉತ್ತಮ ಸಿಬಿಲ್ ಸ್ಕೋರ್ ಇಲ್ಲದ ಕಾರಣದಿಂದಾಗಿ ಹಲವಾರು ವಿದ್ಯಾರ್ಥಿಗಳು ಶಿಕ್ಷಣ ಸಾಲ ಪಡೆಯುವಾಗ ಸಂಕಷ್ಟಕ್ಕೆ ಒಳಗಾಗುವುದು ಇದೆ. ಈ ವಿಚಾರದ ಮೇಲೆ ಬೆಳಕು ಚೆಲ್ಲಿರುವ ಕೇರಳ ಹೈಕೋರ್ಟ್ ಇತ್ತೀಚೆಗೆ ಅತೀ ಮಹತ್ವವಾದ ತೀರ್ಪನ್ನು ನೀಡಿದೆ.

ಸಿಬಿಲ್ ಸ್ಕೋರ್ ಕಡಿಮೆ ಇದೆ ಎಂದು ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ನೀಡಲು ನಿರಾಕರಿಸುವ ಬ್ಯಾಂಕುಗಳಿಗೆ ಕೇರಳ ಹೈಕೋರ್ಟ್‌ನ ನ್ಯಾಯಮೂರ್ತಿ ಪಿವಿ ಕುನ್ನಿಕೃಷ್ಣನ್ ಛೀಮಾರಿ ಹಾಕಿದ್ದಾರೆ. ಬರೀ ಸಿಬಿಲ್ ಸ್ಕೋರ್ ಕಡಿಮೆ ಇದೆ ಎಂದು ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲವನ್ನು ಬ್ಯಾಂಕ್‌ಗಳು ನಿರಾಕರಿಸಬಾರದು ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ಸಾಲವನ್ನು ನೀಡುವ ಸಂದರ್ಭ ಬಂದಾಗ ಅರ್ಜಿಗಳನ್ನು ಪರಿಶೀಲನೆ ಮಾಡುವಾಗ ಬ್ಯಾಂಕುಗಳು ಕೊಂಚ ಸಹಾನುಭೂತಿಯನ್ನು ಹೊಂದಿರಬೇಕು.

ಬರೀ ಸಿಬಿಲ್ ಸ್ಕೋರ್ ಆಧಾರದಲ್ಲಿ ಶಿಕ್ಷಣ ಸಾಲವನ್ನು ನೀಡಲು ನಿರಾಕರಿಸಬಾರದು ಎಂದು ನ್ಯಾಯಮೂರ್ತಿಗಳು ಒತ್ತಿ ಹೇಳಿದ್ದಾರೆ. ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ವಿಚಾರಣೆ ಮಾಡುತ್ತಿದ್ದ ಸಂದರ್ಭದಲ್ಲಿ ಕೇರಳ ಹೈಕೋರ್ಟ್ ಈ ಹೇಳಿಕೆಯನ್ನು ನೀಡಿದೆ. ದೇಶದ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾಲು ಅತೀ ಮುಖ್ಯವಾಗಿರುತ್ತದೆ. ಬರೀ ಸಿಬಿಲ್ ಸ್ಕೋರ್ ಕಡಿಮೆ ಕಡಿಮೆಯಾಗಿದೆ ಎಂದು ಶಿಕ್ಷಣ ಸಾಲವನ್ನು ನೀಡದಿರುವುದು ಸರಿಯಲ್ಲ. ಇಂತಹ ಸಂದರ್ಭದಲ್ಲಿ ಬ್ಯಾಂಕುಗಳು ಮಾನವೀಯತೆ ಅಂಶಗಳನ್ನು ಕೂಡಾ ಪರಿಗಣಿಸಬೇಕು ಎಂದು ಕೋರ್ಟ್ ಹೇಳಿದೆ.

4ನೇ ಪುಟಕ್ಕೆ...

## ದಿನಾಂಕ : 09.06.2023ರಂದು ಮೈಸೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಸದಸ್ಯರುಗಳಿಗೆ ದಿನಾಂಕ : 09.06.2023 ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮೈಸೂರಿನ "The President Hotel" No.2723, Near Harding Circle, B.N.Street, Lashkar Mohalla, Mysore – 570001" ಇಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಧ್ಯಕ್ಷರ / ಉಪಾಧ್ಯಕ್ಷರ ಮತ್ತು ನಿರ್ದೇಶಕ ಮಂಡಳಿಯ ಪಾತ್ರ, ಇತ್ತೀಚಿನ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಹಾಗೂ ಸಹಕಾರ ಸಂಘಗಳ ಕಾಯ್ದೆ ನಿಯಮಗಳ ಪ್ರಮುಖ ಮುಖ್ಯಾಂಶಗಳು, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಬ್ಯಾಂಕಿಂಗೇತರ ಆದಾಯಗಳನ್ನು ಹೆಚ್ಚಿಸುವ ಕ್ರಮಗಳು, ಡಿಜಿಟಲ್ ಬ್ಯಾಂಕಿಂಗ್ ಮತ್ತು ಬ್ಯಾಂಕಿಂಗ್ ತಂತ್ರಾಂಶದ ಅಳವಡಿಕೆಯಿಂದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆಗುವ ಲಾಭ ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು.

ಸದರಿ ವಿಚಾರ ಸಂಕಿರಣವನ್ನು ನೋಂದಣಿ ಹಾಗೂ ಉಪಹಾರದೊಂದಿಗೆ ದಿನಾಂಕ : 09.06.2023ರಂದು ಬೆಳಿಗ್ಗೆ 8.30 ಗಂಟೆಗೆ ಪ್ರಾರಂಭಿಸಲಾಗುವುದು. ಈ ವಿಚಾರ ಸಂಕಿರಣಕ್ಕೆ ತಮ್ಮ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಭಾಗವಹಿಸಿ, ಈ ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ. ಈಗಾಗಲೇ ತಮ್ಮ ಬ್ಯಾಂಕಿನ ಇ–ಮೇಲ್ ವಿಳಾಸಕ್ಕೆ ವಿಚಾರ ಸಂಕಿರಣದ ಸುತ್ತೋಲೆಯನ್ನು ದಿನಾಂಕ:23.05.2023ರಂದು ಕಳುಹಿಸಿಕೊಡಲಾಗಿದೆ.

ಹೊಸ ಪಾವತಿ ವ್ಯವಸ್ಥೆ ರೂಪಿಸುತ್ತಿರುವ ಆರ್‌ಬಿಐ 2
ಐಟಿಆರ್ ಸಲ್ಲಿಸುವಾಗ ಈ 5 ತಪ್ಪುಗಳನ್ನು ಮಾಡದಿರಿ... ತಪ್ಪಾದರೆ ಐಟಿ ನೋಟಿಸ್ ಖಚಿತ 5
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಅಭಿವೃದ್ಧಿಯ ವಿಷಯದಲ್ಲಿ ನಮ್ಮೊಂದಿಗೆ ಕೈ ಜೋಡಿಸಿದಲ್ಲಿ, ದೇಶ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸುವುದು ಅಸಾಧ್ಯವೇನಲ್ಲ

ಮುಂದಿನ ಎರಡು ವರ್ಷಗಳಲ್ಲಿ ಕರ್ನಾಟಕವು 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ನೀತಿ ಆಯೋಗದ ಮಾಜಿ ಮುಖ್ಯಕಾರ್ಯನಿರ್ವಣಾಧಿಕಾರಿ ಯಾಗಿದ್ದ ಅಮಿತಾಭ್ ಕಾಂತ್ ಇತ್ತೀಚೆಗೆ ಆರ್ಥಿಕ ಸಮಾವೇಶವೊಂದರಲ್ಲಿ ಹೇಳಿದ್ದಾರೆ.

ಇಲ್ಲಿ 1 ಟ್ರಿಲಿಯನ್ ಡಾಲರ್ ಎಂದರೆ, 1 ಲಕ್ಷ ಕೋಟಿ ರೂಪಾಯಿಯ ಆರ್ಥಿಕತೆ ಎಂದಾಗುತ್ತದೆ. ಆರ್ಥಿಕ ತಜ್ಞರಾದ ಅಮಿತಾಭ್ ಕಾಂತ್ ಅವರ ಪ್ರಕಾರ ಭವಿಷ್ಯದಲ್ಲಿ ನಮ್ಮ ದೇಶ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿ ಸಾಧಿಸಬೇಕಿದ್ದರೆ, ದಕ್ಷಿಣದ ರಾಜ್ಯಗಳಾದ ಕರ್ನಾಟಕ, ಆಂದ್ರ, ತೆಲಂಗಾಣ, ತಮಿಳುನಾಡು, ಕೇರಳ ರಾಜ್ಯಗಳು ಪ್ರಮುಖ ಪಾತ್ರ ವಹಿಸಬೇಕಿವೆ. ಇನ್ನೆರಡು ವರ್ಷಗಳಲ್ಲೇ ಕರ್ನಾಟಕ ನೆರೆಯ ತಮಿಳುನಾಡು ರಾಜ್ಯಗಳು 1 ಲಕ್ಷ ಕೋಟಿ ರೂಪಾಯಿಯ ಆರ್ಥಿಕತೆ ಸಾಧಿಸಲಿವೆ ಎನ್ನುವ ಮಾತುಗಳನ್ನು ಬೇರೆ ಬೇರೆ ಆರ್ಥಿಕ ತಜ್ಞರು ಹೇಳುತ್ತಲೇ ಇದ್ದಾರೆ. ಅವರ ಮಾತುಗಳಿಗೆ ಆಧಾರ; ಈಗಾಗಲೇ ದೇಶದ ಜಿಡಿಪಿ ಬೇಳವಣಿಗೆಗೆ ಶೇ.30ರಷ್ಟು ಕೊಡುಗೆಯನ್ನು ದಕ್ಷಿಣ ರಾಜ್ಯಗಳೇ ನೀಡುತ್ತಿರುವುದು ಹಾಗೂ ದಕ್ಷಿಣದ ರಾಜ್ಯಗಳಲ್ಲಿನ ತಲಾ ಆದಾಯವು ದೇಶದ ಇತರ ಎಲ್ಲಾ ಭಾಗಗಳಿಗಿಂತ ಹೆಚ್ಚಿನದಾಗಿರುವುದು. ಮಾತ್ರವಲ್ಲ ಹಲವಾರು ಕ್ಷೇತ್ರಗಳಲ್ಲಿ ಈ ರಾಜ್ಯಗಳು ಉತ್ತಮ ಸಾಧನೆ ಮಾಡಿರುವುದನ್ನು ಗಮನಿಸಬಹುದಾಗಿದೆ.

ಹಾಗೆ ನೋಡುವುದಾದರೆ, ದೇಶದ ಒಟ್ಟು ಜನಸಂಖ್ಯೆ 142 ಕೋಟಿಯಾದರೆ, ಅದರಲ್ಲಿ ದಕ್ಷಿಣದ 5ರಾಜ್ಯಗಳ ಜನಸಂಖ್ಯೆ ಕೇವಲ 25 ಕೋಟಿ. ಅದರೂ, ಆರ್ಥಿಕ ಬೆಳವಣಿಗೆಯಲ್ಲಿ ಈ ರಾಜ್ಯಗಳು ಮುಂದಿವೆ. ಅದಕ್ಕೆ ಕಾರಣ; ಈ ರಾಜ್ಯಗಳು ಅಭಿವೃದ್ಧಿ ಸೂಚ್ಯಂಕದಲ್ಲಿ, ಉದ್ಯೋಗ ಮತ್ತು ದುಡಿಮೆಯಲ್ಲಿ ಉತ್ತಮ ಮಟ್ಟ ಕಾಯ್ದುಕೊಂಡಿವೆ. ಇಲ್ಲಿನ ಜೀವನದ ಗುಣಮಟ್ಟ ಮತ್ತು ಆರೋಗ್ಯ, ಶಿಕ್ಷಣ, ಸಾಮಾಜಿಕ ಅಭಿವೃದ್ಧಿಯ ನೀತಿಯ ಸ್ಥಿರತೆ, ಹೀಗೆ ಹಲವು ಸೂಚ್ಯಂಕದಲ್ಲಿ ಉತ್ತರ ರಾಜ್ಯಗಳಿಗಿಂತ ಈ ರಾಜ್ಯಗಳು ಮುಂಚೂಣಿಯಲಿರುವುದನ್ನು ಗಮನಿಸಬಹುದಾಗಿದೆ.

ಜವಳಿ, ಕೈಗಾರಿಕಾ ಉತ್ಪಾದನೆಯಲ್ಲಿ, ಅತ್ಯಾಧುನಿಕ ತಂತ್ರಜ್ಞಾನಾಧಾರಿತ ಕ್ಷೇತ್ರಕ್ಕೆ ಅಗತ್ಯವಿರುವ ಕೌಶಲ್ಯ ಹೊಂದಿರುವ ಕುಶಲಕರ್ಮಿಗಳು ಇಲ್ಲಿದ್ದಾರೆ. ವಿವಿಧ ಬಗೆಯ ಶೇ.35–40ರಷ್ಟು ಔಷಧೀಯ ಉತ್ಪನ್ನಗಳು ಇಲ್ಲಿಯೇ ತಯಾರಾಗುತ್ತವೆ. ಪ್ರವಾಸೋದ್ಯಮ ವಲಯದಲ್ಲೂ ಈ ರಾಜ್ಯಗಳು ಉತ್ತರ ರಾಜ್ಯಗಳಿಗಿಂತ ಮುಂದಿವೆ. ಇದೆಲ್ಲವೂ ಹಲವಾರು ವರ್ಷಗಳಿಂದ ಈ ರಾಜ್ಯಗಳು ಮಾಡಿರುವ ಸಾಧನೆಯನ್ನು ತೋರಿಸುತ್ತದೆ.

ದೇಶದ ಆರ್ಥಿಕತೆಗೆ ಇಷ್ಟೆಲ್ಲಾ ಕೊಡುಗೆ ನೀಡುವ ದಕ್ಷಿಣ ರಾಜ್ಯಗಳಿಗೆ ಕಾನೂನು ಬದ್ಧವಾಗಿ ನೀಡಬೇಕಾದ ಅನುದಾನವನ್ನು ಕೇಂದ್ರ ಸರ್ಕಾರ ನೀಡದೆ ಮಲತಾಯಿ ಧೋರಣೆ ತೋರುತ್ತದೆ. ಇಲ್ಲಿನ ಯೋಜನೆಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲಗಳನ್ನು ನೀಡಲು ಸತಾಯಿಸಲಾಗುತ್ತದೆ. ಕೇಂದ್ರ ಸರ್ಕಾರ ಜಾತಿ, ಧರ್ಮ ರಾಜಕಾರಣವನ್ನು ಬದಿಗಿಡಬೇಕು. ಅಭಿವೃದ್ಧಿಯ ವಿಚಾರಗಳತ್ತ ಗಮನ ಹರಿಸಿ, ದಕ್ಷಿಣ ರಾಜ್ಯಗಳೊಂದಿಗೆ ಕೈ ಜೋಡಿಸಬೇಕು. ಆಗ ಭವಿಷ್ಯದಲ್ಲಿ ನಮ್ಮ ದೇಶ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಗುರಿ ಸಾಧಿಸುವುದು ಅಸಾಧ್ಯವೇನಲ್ಲ.

▸▸ ಎಚ್.ಕೆ. ಪಾಟೀಲ್

## ಹೊಸ ಪಾವತಿ ವ್ಯವಸ್ಥೆ ರೂಪಿಸುತ್ತಿರುವ ಆರ್‌ಬಿಐ

**ಮುಂಬಯಿ :** ನೈಸರ್ಗಿಕ ವಿಕೋಪ, ಯುದ್ಧದಂತಹ ದುರಂತಗಳ ಸಂದರ್ಭಗಳಲ್ಲಿ ಬಳಕೆಗೆ ಬರುವ, ಹಗುರವಾದ ಹಾಗೂ ಎಲ್ಲಿಗೆ ಬೇಕಿದ್ದರೂ ಒಯ್ಯಲು ಆಗುವಂತಹ ಪಾವತಿ ವ್ಯವಸ್ಥೆಯೊಂದನ್ನು ರೂಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೆಲಸ ಮಾಡುತ್ತಿದೆ.

ಇದನ್ನು ಆರ್‌ಬಿಐ 'ಪಾವತಿ ವ್ಯವಸ್ಥೆಯ ಪಾಲಿನ ಬಂಕರ್' ಇದ್ದಂತೆ ಎಂದು ಬಣ್ಣಿಸಿದೆ. ಈ ವ್ಯವಸ್ಥೆಯು ಈಗಿರುವ ಯಾವುದೇ ಸಾಂಪ್ರದಾಯಿಕ ಪಾವತಿ ವ್ಯವಸ್ಥೆಯ ಜೊತೆ ನಂಟು ಹೊಂದಿರುವುದಿಲ್ಲ. ಇದನ್ನು ಕನಿಷ್ಠ ಸಂಖ್ಯೆಯ ಸಿಬ್ಬಂದಿಯೊಂದಿಗೆ ಎಲ್ಲಿಂದ ಬೇಕಿದ್ದರೂ ನಿರ್ವಹಿಸಬಹುದು ಎಂದು ಆರ್‌ಬಿಐ ಹೇಳಿದೆ.




ಈಗಿರುವ ಸಾಂಪ್ರದಾಯಿಕ ಪಾವತಿ ವ್ಯವಸ್ಥೆಗಳಾಗಿರುವ ಆರ್‌ಟಿಜಿಎಸ್, ಎನ್‌ಇಎಫ್‌ಟಿ ಮತ್ತು ಯುಪಿಐ ಭಾರಿ ಪ್ರಮಾಣದ ವಹಿವಾಟುಗಳನ್ನು ನಿಭಾಯಿಸಲು ವಿನ್ಯಾಸಗೊಂಡಿವೆ. ಆದರೆ ಈ ವ್ಯವಸ್ಥೆಗಳಿಗೆ ಸಂಕೀರ್ಣ ಜಾಲ ಹಾಗೂ ಉನ್ನತ ಐ.ಟಿ. ಮೂಲ ಸೌಕರ್ಯದ ಅಗತ್ಯವಿದೆ.

ನೈಸರ್ಗಿಕ ವಿಕೋಪಗಳು ಹಾಗೂ ಯುದ್ಧದಂತಹ ದುರಂತಗಳು, ಮಾಹಿತಿ ಮತ್ತು ಸಂವಹನ ವ್ಯವಸ್ಥೆಯನ್ನು ಹಾಳುಗೆಡವಿ ಈ ವ್ಯವಸ್ಥೆಗಳನ್ನು ಕೆಲವು ಹೊತ್ತಿನವರೆಗೆ ನಿಷ್ಕ್ರಿಯವಾಗಿಸಬಹುದು ಎಂದು ಆರ್‌ಬಿಐ ತನ್ನ ವಾರ್ಷಿಕ ವರದಿಯಲ್ಲಿ ವಿವರಿಸಿದೆ.

ಇವನ್ನು ಗಮನದಲ್ಲಿ ಇರಿಸಿಕೊಂಡು ಆರ್‌ಬಿಐ ಹೊಸ ವ್ಯವಸ್ಥೆ ರೂಪಿಸಲು ಕೆಲಸ ಮಾಡುತ್ತಿದೆ. ಹೊಸ ವ್ಯವಸ್ಥೆಯು ಅತ್ಯಂತ ಕಡಿಮೆ ಪ್ರಮಾಣದ ತಂತ್ರಾಂಶಗಳನ್ನು ಮತ್ತು ಯಂತ್ರಾಂಶಗಳನ್ನು ಬಳಸಿಕೊಳ್ಳುತ್ತದೆ. ಅಗತ್ಯ ಅನ್ನಿಸಿದ ಸಂದರ್ಭಗಳಲ್ಲಿ ಮಾತ್ರ ಇದನ್ನು ಬಳಸಿಕೊಳ್ಳಬಹುದು. ಅರ್ಥ ವ್ಯವಸ್ಥೆಯ ಸ್ಥಿರತೆಗೆ ಅಗತ್ಯವಿರುವ ವಹಿವಾಟುಗಳನ್ನು ಇದು ನಿಭಾಯಿಸುತ್ತದೆ' ಎಂದು ಆರ್‌ಬಿಐ ಹೇಳಿದೆ.

## 9ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ ಲಿಖಿತ ಪರೀಕ್ಷೆಗಳು ದಿನಾಂಕ : 24.06.2023, 25.06.2023 ಮತ್ತು 02.07.2023

**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ "ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್" ಕೋರ್ಸ್‌ನ್ನು ಈಗಾಗಲೇ ಪ್ರಾರಂಭಿಸಿರುತ್ತದೆ. ಸದರಿ ಕೋರ್ಸ್‌ಗೆ ಈಗಾಗಲೇ ತಾವು ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೀರಿ. ಲಿಖಿತ ಪರೀಕ್ಷೆಗಳ ದಿನಾಂಕವನ್ನು ಆರ್‌ಐಸಿಎಂ (ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು) ಬೆಂಗಳೂರು ಇವರು ದಿನಾಂಕ : 24.06.2023, 25.06.2023 & ದಿನಾಂಕ : 02.07.2023ರಂದು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 05.00 ಗಂಟೆಯವರಿಗೆ ಬೆಂಗಳೂರು, ಆರ್‌ಐಸಿಎಂ, ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-70 ಮತ್ತು ಬಾಗಲಕೋಟೆಯ ಅಜೀತ್ ಪಿ.ಯು. ಅಕಾಡೆಮಿ ಕಾಲೇಜ್, ಹಿಂದುಸ್ತಾನಿ ಸೇವಾದಳ ಕ್ಯಾಂಪಸ್, ಸೆಕ್ಟರ್ ನಂ.63ಎ, ಬೃಂದಾವನ ಸೆಕ್ಟರ್, ಸಿ-ರಸ್ತೆ, ಸೆಂಟ್ ಮೇರಿಸ್ ಚರ್ಚ್ ಹತ್ತಿರ, ನವನಗರ, ಬಾಗಲಕೋಟೆ-587103 ಈ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿವೆ. ಅಭ್ಯರ್ಥಿಗಳು ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ಆದ್ದರಿಂದ ತಾವು ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬಹುದಾಗಿದೆ.

## ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಿಶ್ವನಾಥ ಬಿ. ಕುಲಕರ್ಣಿರವರ ಬೀಳ್ಕೋಡುಗೆ ಸಮಾರಂಭ





ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯಲ್ಲಿ ಉಪಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವಿಶ್ವನಾಥ ಬಿ. ಕುಲಕರ್ಣಿಯವರು ಸುಮಾರು 33 ವರ್ಷಗಳ ಸುದೀರ್ಘ ಕಾಲ ಮಹಾಮಂಡಳದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ದಿನಾಂಕ : 31.05.2023ರಂದು ವಯೋನಿವೃತ್ತಿ ಹೊಂದಿದರು.



ಹುಬ್ಬಳ್ಳಿ ಪ್ರಾಂತೀಯ ಕಛೇರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿಯವರಾದ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441) ಶ್ರೀ ಹೆಚ್.ವೈ. ಗದ್ದನಕೇರಿಯವರು ಶ್ರೀ ವಿಶ್ವನಾಥ ಬಿ. ಕುಲಕರ್ಣಿ ದಂಪತಿಗಳನ್ನು ಗೌರವಿಸಿ ಸನ್ಮಾನಿಸಿದರು.


ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಹುಬ್ಬಳ್ಳಿ ಪ್ರಾಂತೀಯ ಕಛೇರಿಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳಾದ ಶ್ರೀ ಎಸ್.ಕೆ. ಸಜ್ಜನ, ಮಹಾಮಂಡಳದ ಅಧಿಕಾರಿ, ಸಿಬ್ಬಂದಿ ವರ್ಗ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಮಹಾಮಂಡಳದ ಆಡಳಿತ ಮಂಡಳಿ / ಅಧಿಕಾರಿ / ಸಿಬ್ಬಂದಿ ವರ್ಗದವರು ಶ್ರೀ ವಿಶ್ವನಾಥ ಬಿ. ಕುಲಕರ್ಣಿ ಇವರ ನಿವೃತ್ತ ಜೀವನವು ಸುಖಕರವಾಗಿರಲೆಂದು ಹಾರೈಸಿದರು.

# ಜನವರಿ–ಮಾರ್ಚ್ ಜಿಡಿಪಿ ಶೇ.7.2ಕ್ಕೆ ಏರಿಕೆ




**ನವದೆಹಲಿ :** ಭಾರತದ ಒಟ್ಟು ಆಂತರಿಕ ಉತ್ಪನ್ನ ದರ (ಜಿಡಿಪಿ) 2022–23ರಲ್ಲಿ ಶೇ. 7.2ಕ್ಕೆ ಬೆಳವಣಿಗೆ ಕಂಡಿದ್ದು, ಚೀನಾದ ಜಿಡಿಪಿ (ಶೇ. 4.5)ಗಿಂತ ಮುಂದಿದೆ. ಆದರೆ, 2021–22ನೇ ಸಾಲಿನ ಜಿಡಿಪಿ (ಶೇ. 9.1)ಗಿಂತ ಶೇ. 1.9 ಕಡಿಮೆ ಇದೆ. 2022–23ರ ಕಡೆಯ ತ್ರೈಮಾಸಿಕ (ಜನವರಿ–ಮಾರ್ಚ್)ದಲ್ಲಿ ಜಿಡಿಪಿ ಶೇ. 6.1ರ ಪ್ರಗತಿ ದಾಖಲಿಸಿದೆ.

ಕೃಷಿ, ತಯಾರಿಕೆ, ಗಣಿ, ಕಟ್ಟಡ ಕಾಮಗಾರಿ ವಲಯದ ಪ್ರಗತಿಯಿಂದಾಗಿ ಜಿಡಿಪಿಯಲ್ಲಿ ಏರಿಕೆ ಆಗಿದೆ, ಈ ಬೆಳವಣಿಗೆಯಿಂದ ಭಾರತದ ಆರ್ಥಿಕತೆ 272.41 ಲಕ್ಷ ಕೋಟಿ ರೂ. (3.30 ಟ್ರಿಲಿಯನ್ ಡಾಲರ್) ಮುಟ್ಟಿದ್ದು, ಮುಂದಿನ ಕೆಲ ವರ್ಷದಲ್ಲಿ 5 ಟ್ರಿಲಿಯನ್ ಡಾಲರ್ ಮುಟ್ಟುವ ಕನಸಿಗೆ ನೀರೆರೆದಿದೆ ಎಂದು ಬುಧವಾರ ಜಿಡಿಪಿ ಅಂಕಿಅಂಶ ಬಿಡುಗಡೆ ಮಾಡಿದ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಹೇಳಿದೆ. ಫೆಬ್ರವರಿಯಲ್ಲಿ ಜಿಡಿಪಿ ಕುರಿತಂತೆ ಎನ್‌ಎಸ್‌ಒ ಬಿಡುಗಡೆ ಮಾಡಿದ್ದ ಎರಡನೇ ಅಂದಾಜು ವರದಿಯಲ್ಲಿ ಶೇ. 7ರ ಜಿಡಿಪಿ ನಿರೀಕ್ಷಿಸಿತ್ತು. ರೂಪಾಯಿ ಲೆಕ್ಕದಲ್ಲಿ ಜಿಡಿಪಿ 160.06 ಲಕ್ಷ ಕೋಟಿ ಇದ್ದು, ಮೊದಲ ಅಂದಾಜಿನಲ್ಲಿ ಇದನ್ನು 149.26 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿತ್ತು. ಚಾಲ್ತಿ ದರದಲ್ಲಿ ಆರ್ಥಿಕ ಬೆಳವಣಿಗೆಯು 272.41 ಲಕ್ಷ ಕೋಟಿ ರೂ.ಗೆ ಹಿಗ್ಗಿದೆ. 2021–22ಕ್ಕೆ ಹೋಲಿಸಿದರೆ ಶೇ. 16ರಷ್ಟು ಏರಿಕೆ ದಾಖಲಿಸಿದೆ. 2021–22ನೇ ಸಾಲಿನಲ್ಲಿ ಇದು 234.71 ಲಕ್ಷ ಕೋಟಿ ರೂ. (2.80 ಟ್ರಿಲಿಯನ್ ಡಾಲರ್) ಇತ್ತು. 2022–23ನೇ ಕಡೆಯ ತ್ರೈಮಾಸಿಕದಲ್ಲಿ ಜಿಡಿಪಿ ರೂಪಾಯಿ ಲೆಕ್ಕಾಚಾರ 43.62 ಲಕ್ಷ ಕೋಟಿ ಇದ್ದರೆ, 2021–22ನೇ ಕಡೆಯ ತ್ರೈಮಾಸಿಕದಲ್ಲಿ ಇದು 41.12 ಲಕ್ಷ ಕೋಟಿ ರೂ. ಇತ್ತು. 2011–12ರಿಂದಲೂ ಚತುರ್ಥ ತ್ರೈಮಾಸಿಕದಲ್ಲಿ ಜಿಡಿಪಿ ಪ್ರಗತಿಯ ಹಾದಿಯಲ್ಲೇ ಇದೆ. 2022–23ರ ಒಟ್ಟಾರೆ ರಾಷ್ಟ್ರೀಯ ಆದಾಯ 3,80,964 ಕೋಟಿ ರೂ. ಇದ್ದು, ಹಿಂದಿನ ಆರ್ಥಿಕ ಸಾಲಿನಲ್ಲಿ ಇದು 4,47,182 ಕೋಟಿ ರೂ. ಇತ್ತು ಎಂದು ಎಂದು ವಿವರಿಸಿದೆ.



**2022-23ರ ತ್ರೈಮಾಸಿಕವಾರು ಜಿಡಿಪಿ**

| | |
|---|---|
| ಏಪ್ರಿಲ್-ಜೂನ್ | ಶೇ.13.1 |
| ಜುಲೈ-ಸೆಪ್ಟೆಂಬರ್ | ಶೇ.6.2 |
| ಅಕ್ಟೋಬರ್-ಡಿಸೆಂಬರ್ | ಶೇ.4.5 |
| ಜನವರಿ-ಮಾರ್ಚ್ | ಶೇ.6.1 |
| ಆರ್ಥಿಕ ಸಾಲಿನಲ್ಲಿ | ಶೇ.7.2 |

**ಜಿವಿಎಯಲ್ಲಿ ಬೆಳವಣಿಗೆ :** ಒಟ್ಟಾರೆ ಮೌಲ್ಯ ಕ್ರೋಢೀಕರಣದ (ಜಿವಿಎ) ಪ್ರಗತಿ ಶೇ. 7 ಇದ್ದು, ಹಿಂದಿನ ಆರ್ಥಿಕ ಸಾಲಿಗಿಂತ (ಶೇ. 8.8) ಇಳಿಕೆ ಎನಿಸಿದರೂ ಕಡೆಯ ತ್ರೈಮಾಸಿಕದಲ್ಲಿ ಇದು ಬೆಳವಣಿಗೆ ದಾಖಲಿಸಿದೆ. 2022–23ರ ಕಡೆಯ ತ್ರೈಮಾಸಿಕದಲ್ಲಿ ತಯಾರಿಕಾ ವಲಯದ ಜಿವಿಎ ಶೇ. 4.5 ಇದ್ದರೆ ಹಿಂದಿನ ಸಾಲಿನ ಇದೇ ತ್ರೈಮಾಸಿಕದಲ್ಲಿ ಇದು ಶೇ. 0.6 ಇತ್ತು. ಗಣಿಗಾರಿಕೆಯ ಜಿವಿಎ ಶೇ. 2.3 ರಿಂದ ಶೇ. 4.3ಕ್ಕೆ ಕಟ್ಟಡ ನಿರ್ಮಾಣದಲ್ಲಿ ಶೇ. 4.9 ರಿಂದ ಶೇ. 10.4ಕ್ಕೆ, ಕೃಷಿಯಲ್ಲಿ ಶೇ. 4.1 ರಿಂದ ಶೇ. 5.5ಕ್ಕೆ ಹಾಗೂ ವಿದ್ಯುತ್, ಗ್ಯಾಸ್, ನೀರು ಪೂರೈಕೆ ಇನ್ನಿತರ ನಾಗರಿಕ ಸೇವೆಗಳಲ್ಲಿ ಶೇ. 6.7ರಿಂದ ಶೇ. 6.9ಕ್ಕೆ ಮತ್ತು ವಾಣಿಜ್ಯ, ಹೋಟೆಲ್, ಸಾರಿಗೆ, ಸಂಪರ್ಕ ಇನ್ನಿತರ ಸೇವೆಗಳಲ್ಲಿ ಶೇ. 5ರಿಂದ ಶೇ. 9.1ಕ್ಕೆ ಜಿವಿಎ ಬೆಳವಣಿಗೆ ಕಂಡಿದೆ. ಆದರೆ, ಸಾರ್ವಜನಿಕ ಆಡಳಿತ, ರಕ್ಷಣೆ ಇನ್ನಿತರ ಸೇವೆಗಳ ಜಿವಿಎ ಶೇ. 3.1 ಇದ್ದು, ಹಿಂದಿನ ಸಾಲಿನ ತ್ರೈಮಾಸಿಕಕ್ಕಿಂತ (ಶೇ. 5.2) ಕಡಿಮೆ ಇದೆ.

...1ನೇ ಪುಟದಿಂದ

### ಈ ಕಾನೂನು ಹಸ್ತಕ್ಷೇಪಕ್ಕೆ ಕಾರಣವೇನು?

ಅರ್ಜಿದಾರ ವಿದ್ಯಾರ್ಥಿಯು ಎರಡು ಬಾಕಿ ಸಾಲಗಳನ್ನು ಹೊಂದಿದ್ದು, ಒಂದು ಸಾಲದ ಮೊತ್ತವು 16,667 ರೂಪಾಯಿ ಆಗಿದೆ. ಪರಿಣಾಮವಾಗಿ, ಬ್ಯಾಂಕ್ ವಿದ್ಯಾರ್ಥಿಯ ಸಾಲದ ಖಾತೆಯನ್ನು ಓವರ್ ಡ್ಯೂ ಎಂದು ಪರಿಗಣಿಸಿದೆ, ಇದು ವಿದ್ಯಾರ್ಥಿಯ ಸಿಬಿಲ್ ಸ್ಕೋರ್ ಮೇಲೆ ಪರಿಣಾಮ ಉಂಟು ಮಾಡಿದೆ. ಹೀಗಿರುವಾಗ ವಿದ್ಯಾರ್ಥಿಯು ಶಿಕ್ಷಣ ಸಾಲಕ್ಕೆ ಅರ್ಜಿ ಸಲ್ಲಿಸಿದಾಗ ಸಿಬಿಲ್ ಸ್ಕೋರ್ ಕಡಿಮೆ ಇದೆ ಎಂಬ ಕಾರಣದಿಂದಾಗಿ ಶಿಕ್ಷಣ ಸಾಲ ಅನುಮೋದನೆ ಮಾಡಲಾಗಿಲ್ಲ. ಈ ಸಂದರ್ಭದಲ್ಲಿ ವಿದ್ಯಾರ್ಥಿಯು ಶಿಕ್ಷಣದ ಮೇಲೆ ಉಂಟಾಗುವ ಕೆಟ್ಟ ಪರಿಣಾಮವನ್ನು ತಪ್ಪಿಸಲು ಸಾಲಕ್ಕೆ ತುರ್ತಾಗಿ ಅನುಮೋದನೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಈ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಪರಿಶೀಲನೆ ಮಾಡಿದ ಕೇರಳ ಹೈಕೋರ್ಟ್ ಬ್ಯಾಂಕುಗಳು ಆ ವಿದ್ಯಾರ್ಥಿಯು ಶಿಕ್ಷಣ ಪೂರ್ಣವಾದ ಬಳಿಕ ಸಾಲವನ್ನು ಪಾವತಿಸುವ ಸಾಮರ್ಥ್ಯವನ್ನು ನೋಡಬೇಕು, ಬರೀ ಈಗ ಇರುವ ಸಿಬಿಲ್ ಸ್ಕೋರ್ ಆಧಾರದಲ್ಲಿ ಶಿಕ್ಷಣ ಸಾಲ ನೀಡಬಹುದೇ ಎಂದು ಪರಿಶೀಲನೆ ಮಾಡಬಾರದು ಎಂದು ಹೈಕೋರ್ಟ್ ಹೇಳಿದೆ. ಸಿಬಿಲ್ ಸ್ಕೋರ್ ಅನ್ನು ನಿರ್ವಹಿಸುವ ಪ್ರಾಮುಖ್ಯತೆ ಜೀವನದಲ್ಲಿ ನಾವು ಸಾಲವನ್ನು ಪಡೆಯಬೇಕಾದ ತೀರ ಅಗತ್ಯ ಸಂದರ್ಭದಲ್ಲಿ ಬರುತ್ತದೆ. ಶಿಕ್ಷಣ, ಗೃಹ, ಕಾರು ಮೊದಲಾದ ಸಾಲಗಳನ್ನು ನಾವು ಪಡೆಯಬೇಕಾಗುತ್ತದೆ. ಇಂತಹ ಸಾಲವನ್ನು ಅನುಮೋದನೆ ಮಾಡುವ ಮುನ್ನ ಬ್ಯಾಂಕುಗಳು ಸಿಬಿಲ್ ಸ್ಕೋರ್ ಅನ್ನು ಪರಿಶೀಲನೆ ಮಾಡುತ್ತದೆ. ನಮ್ಮ ಸಿಬಿಲ್ ಸ್ಕೋರ್ ಕಡಿಮೆಯಾಗಿದ್ದರೆ ಕೆಲವು ಸಂದರ್ಭದಲ್ಲಿ ಸಾಲ ಲಭ್ಯವಾಗುವುದಿಲ್ಲ, ಸಾಲ ಲಭ್ಯವಾದರೂ ಕೂಡಾ ಅಧಿಕ ಬಡ್ಡಿದರ ಇರುತ್ತದೆ. ನಮಗೆ ಸಾಲವು ಕಡಿಮೆ ಬಡ್ಡಿದರದಲ್ಲಿ ಅಡೆತಡೆ ಇಲ್ಲದೆ ಲಭ್ಯವಾಗಬೇಕಾದರೆ ಸಿಬಿಲ್ ಸ್ಕೋರ್ ಹೆಚ್ಚಿರುವಂತೆ ನೋಡಿಕೊಳ್ಳುವುದು ಮುಖ್ಯವಾಗುತ್ತದೆ. ಅದಕ್ಕಾಗಿ ನಾವು ಈ ಹಿಂದೆ ಯಾವುದೆ ಸಾಲವನ್ನು ಪಡೆದಿದ್ದರೆ ಅಥವಾ ಕ್ರೆಡಿಟ್ ಕಾರ್ಡ್ ಇದ್ದರೆ ಅದರ ಮರುಪಾವತಿಯನ್ನು ನಾವು ಸಮಯಕ್ಕೆ ಸರಿಯಾಗಿ ಮಾಡಬೇಕಾಗುತ್ತದೆ.

# ಐಟಿಆರ್ ಸಲ್ಲಿಸುವಾಗ ಈ 5 ತಪ್ಪುಗಳನ್ನು ಮಾಡದಿರಿ... ತಪ್ಪಾದರೆ ಐಟಿ ನೋಟಿಸ್ ಖಚಿತ




**2022-23ರ ಆರ್ಥಿಕ ವರ್ಷದ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ಚಟುವಟಿಕೆ ಆರಂಭವಾಗಿದೆ. ಜುಲೈ 31ರವರೆಗೂ ಐಟಿಆರ್ ಫೈಲ್ ಮಾಡಲು ಆದಾಯ ತೆರಿಗೆ ಇಲಾಖೆ ಗಡುವು ನೀಡಿದೆ. ಆನ್‌ಲೈನ್‌ನಲ್ಲಿ ಐಟಿಆರ್ ಸಲ್ಲಿಸುವವರು ಆತುರದಲ್ಲಿ ಕೆಲವು ತಪ್ಪುಗಳನ್ನು ಮಾಡುವ ಅಪಾಯವಿದೆ. ಈ ಎಡವಟ್ಟುಗಳನ್ನು ಮಾಡಿಕೊಂಡರೆ ಐಟಿಯಿಂದ ನೋಟಿಸ್ ಪಡೆಯುವ ಸಂಕಷ್ಟಕ್ಕೆ ಸಿಲುಕುವುದು ಖಚಿತ. ಹಾಗಾದರೆ, ಐಟಿಆರ್ ಸಲ್ಲಿಕೆ ಮಾಡುವಾಗ ನೀವು ಗಮನ ಹರಿಸಬೇಕಾದ ಅಂಶಗಳು ಯಾವುವು? ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್ ವೇಳೆಯಲ್ಲಿ ತಪ್ಪುಗಳಾಗದಂತೆ ಎಚ್ಚರ ವಹಿಸಿ ಐಟಿಆರ್ ಸಲ್ಲಿಸುವಾಗ ನಿಮ್ಮ ಬ್ಯಾಂಕ್ ಖಾತೆಯನ್ನು ಮೊದಲೇ ದೃಢೀಕರಿಸಿಕೊಳ್ಳಿ ತಪ್ಪಾದ ಐಟಿಆರ್ ಫಾರ್ಮ್ ಅನ್ನು ಆಯ್ಕೆ ಮಾಡಿದರೆ ನಿಮ್ಮ ಪ್ರಯತ್ನ ವ್ಯರ್ಥ**

**ಹೊಸದಿಲ್ಲಿ :** ಪ್ರಸ್ತುತ ಆನ್‌ಲೈನ್ ಐಟಿಆರ್ ಫೈಲಿಂಗ್ ಆರಂಭವಾಗಿದೆ. ಆದಾಯ ತೆರಿಗೆದಾರರು 2022-23ರ ಆರ್ಥಿಕ ವರ್ಷಕ್ಕೆ ತಮ್ಮ ಆದಾಯ ತೆರಿಗೆ ರಿಟರ್ನ್ಸ್ ಅಥವಾ ಐಟಿಆರ್‌ಗಳನ್ನು ಸಲ್ಲಿಸಲು ಪ್ರಾರಂಭಿಸಿದ್ದಾರೆ.

ಆದಾಯ ತೆರಿಗೆ ಇಲಾಖೆಯು ಐಟಿಆರ್-1, ಐಟಿಆರ್-2, ಮತ್ತು ಐಟಿಆರ್-4 ಗಾಗಿ ಆನ್‌ಲೈನ್ ಫಾರ್ಮ್‌ಗಳನ್ನು ಆದಾಯ ತೆರಿಗೆ ಇಲಾಖೆಯು ಪೂರ್ವ-ಭರ್ತಿ ಮಾಡಿದ ಡೇಟಾದೊಂದಿಗೆ ಸಕ್ರಿಯಗೊಳಿಸಿದೆ. ಐಟಿಆರ್ ಸಲ್ಲಿಸಲು ಜುಲೈ 31 ಕೊನೆಯ ದಿನಾಂಕವಾಗಿದೆ. ಐಟಿಆರ್ ಫೈಲ್ ಮಾಡುವ ವೇಳೆ ಕೆಳಗಿನ ಈ ಐದು ಸಾಮಾನ್ಯ ತಪ್ಪುಗಳನ್ನು ಮಾಡಬೇಡಿ. ತಪ್ಪುಗಳಾದರೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬರುತ್ತದೆ. ಹೀಗಾಗಿ, ಎಚ್ಚರಿಕೆ ಅತ್ಯಗತ್ಯ.

**1. ಐಟಿಆರ್ ಫಾರ್ಮ್ ಆಯ್ಕೆ ತಪ್ಪಾಗಿರುವುದು :** ತಪ್ಪಾದ ಐಟಿಆರ್ ಫಾರ್ಮ್ ಅನ್ನು ಆಯ್ಕೆ ಮಾಡುವುದು ತೆರಿಗೆದಾರರ ಕಡೆಯಿಂದ ಆಗುವ ಸಾಮಾನ್ಯ ತಪ್ಪು. ಇದು ನಿಮ್ಮ ಆದಾಯ ತೆರಿಗೆಯನ್ನು ಸಲ್ಲಿಸುವ ಸಂಪೂರ್ಣ ಪ್ರಕ್ರಿಯೆಯನ್ನು ತಪ್ಪಾಗಿ ಮಾಡುತ್ತದೆ. ಈ ಕಾರಣಕ್ಕಾಗಿ, ನಿಮ್ಮ ಐಟಿಆರ್ ಅನ್ನು ಆದಾಯ ತೆರಿಗೆ ಇಲಾಖೆಯು ತಿರಸ್ಕರಿಸುತ್ತದೆ.

**2. ಬಡ್ಡಿ ಆದಾಯ :** ಐಟಿಆರ್ ಅನ್ನು ಸಲ್ಲಿಸುವಾಗ, ನಾವು ಎಲ್ಲಾ ಮೂಲಗಳಿಂದ ಆದಾಯವನ್ನು ವರದಿ ಮಾಡಬೇಕು. ಅನೇಕ ಬಾರಿ ಜನರು ತಮ್ಮ ಆದಾಯವನ್ನು ಸಂಬಳ, ಬಂಡವಾಳ ಲಾಭ ಮತ್ತು ಆಸ್ತಿಯಿಂದ ವರದಿ ಮಾಡುತ್ತಾರೆ, ಆದರೆ ಬಡ್ಡಿಯಿಂದ ಪಡೆದ ಮೊತ್ತವನ್ನು ತಮ್ಮ ಆದಾಯಕ್ಕೆ ಸೇರಿಸುವುದಿಲ್ಲ. ಈ ಕಾರಣಕ್ಕಾಗಿ, ಹಲವಾರು ಬಾರಿ ಐಟಿಆರ್ ಅನ್ನು ಭರ್ತಿ ಮಾಡಿದ ನಂತರ, ಆದಾಯ ತೆರಿಗೆ ಇಲಾಖೆಯು ದಂಡವನ್ನು ವಿಧಿಸುತ್ತದೆ.

**3. ಬ್ಯಾಂಕ್ ಖಾತೆಯನ್ನು ದೃಢೀಕರಿಸಿ :** ಆದಾಯ ತೆರಿಗೆ ರಿಟರ್ನ್ ಸಲ್ಲಿಸುವಾಗ ನಿಮ್ಮ ಬ್ಯಾಂಕ್ ಖಾತೆಯನ್ನು ಮೊದಲೇ ದೃಢೀಕರಿಸುವುದು ಬಹಳ ಮುಖ್ಯ, ಏಕೆಂದರೆ ನೀವು ಹೆಚ್ಚುವರಿ ತೆರಿಗೆಯನ್ನು ಪಾವತಿಸಿದ್ದರೆ, ಈ ಖಾತೆಯಲ್ಲಿ ನೀವು ಮರುಪಾವತಿಯನ್ನು (ಐಟಿ ರೀಫಂಡ್) ಪಡೆಯುತ್ತೀರಿ. ಸರಿಯಾದ ಬ್ಯಾಂಕ್ ಖಾತೆ ನೀಡದಿದ್ದರೆ, ಆದಾಯ ತೆರಿಗೆ ಇಲಾಖೆಯು ನಿಮ್ಮ ಮರುಪಾವತಿಯನ್ನು ಬ್ಯಾಂಕ್ ಖಾತೆಗೆ ಕಳುಹಿಸಲು ಸಾಧ್ಯವಾಗುವುದಿಲ್ಲ.

**4. ಮೌಲ್ಯಮಾಪನ ವರ್ಷದ ಆಯ್ಕೆ :** ತಪ್ಪಾದ ಮೌಲ್ಯಮಾಪನ ವರ್ಷವನ್ನು ಆಯ್ಕೆ ಮಾಡುವುದು ಸಾಮಾನ್ಯ ತಪ್ಪು. ಮಾಹಿತಿಯ ಕೊರತೆಯಿಂದಾಗಿ, ಹೂಡಿಕೆದಾರರು ತಪ್ಪಾದ ಮೌಲ್ಯಮಾಪನ ವರ್ಷವನ್ನು ಆಯ್ಕೆ ಮಾಡುತ್ತಾರೆ. ಈ ಕಾರಣದಿಂದಾಗಿ ತೆರಿಗೆದಾರರ ಐಟಿಆರ್ ತಪ್ಪಾಗುತ್ತದೆ ಮತ್ತು ಆದಾಯ ತೆರಿಗೆ ಇಲಾಖೆಯು ನಿಮ್ಮ ಫಾರ್ಮ್ ಅನ್ನು ತಿರಸ್ಕರಿಸುತ್ತದೆ.

**5. ಐಟಿಆರ್ ಅನ್ನು ಪರಿಶೀಲಿಸದಿರುವುದು :** ಐಟಿಆರ್ ಅನ್ನು ಪರಿಶೀಲಿಸದಿರುವುದು ತೆರಿಗೆದಾರರು ಸಾಮಾನ್ಯವಾಗಿ ಮಾಡುವ ಸಾಮಾನ್ಯ ತಪ್ಪು. ಇದರಿಂದಾಗಿ ಹಲವು ಬಾರಿ ಅವರಿಗೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಕೂಡ ಬರುತ್ತದೆ. ಅದನ್ನು ಸರಿಪಡಿಸಲು ಸಹ ಬಹಳ ಸಮಯ ತೆಗೆದುಕೊಳ್ಳುತ್ತದೆ. ಪ್ರಸ್ತುತ ಐಟಿಆರ್ ಅನ್ನು ಭರ್ತಿ ಮಾಡಿದ ನಂತರ, ಅದನ್ನು ಪರಿಶೀಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ.

# ಸಾಲದ ಬಡ್ಡಿದರ ಏರಿಸಿದ ಪ್ರಮುಖ ಬ್ಯಾಂಕುಗಳು



ದೇಶದ ಪ್ರಮುಖ ಖಾಸಗಿ ವಲಯದ ಬ್ಯಾಂಕ್ ಆದ ಐಸಿಐಸಿಐ ಬ್ಯಾಂಕ್ ಹಾಗೂ ದೇಶದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್ ಆದ ಪಂಜಾಬ್ ನ್ಯಾಷನಲ್ ಬ್ಯಾಂಕ್ ತನ್ನ ಸಾಲದ ಬಡ್ಡಿದರವನ್ನು ಏರಿಕೆ ಮಾಡಿದೆ. ಈ ಪ್ರಮುಖ ಬ್ಯಾಂಕ್‌ಗಳಲ್ಲಿ ಜೂನ್ 2023ರ ಮಾರ್ಜಿನಲ್ ಕಾಸ್ಟ್ ಬೇಸ್ಡ್ ಲೆಂಡಿಂಗ್ ರೇಟ್ ಅಥವಾ ಎಂಸಿಎಲ್‌ಆರ್ ಅನ್ನು ಪರಿಷ್ಕರಣೆ ಮಾಡಲಾಗಿದೆ. ಈ ಎರಡು ಪ್ರಮುಖ ಬ್ಯಾಂಕುಗಳು ಎಂಸಿಎಲ್‌ಆರ್ ಅನ್ನು ಕೆಲವು ಮೂಲಾಂಕ ಹೆಚ್ಚಳಗೊಳಿಸಿದೆ. ನಿರ್ದಿಷ್ಟ ಅವಧಿಗೆ ಎಂಸಿಎಲ್‌ಆರ್ ಅನ್ನು ಏರಿಕೆ ಮಾಡಿದ್ದರೆ, ಕೆಲವು ಅವಧಿಗೆ ಎಂಸಿಎಲ್‌ಆರ್ ಅನ್ನು ಇಳಿಕೆ ಮಾಡಲಾಗಿದೆ. ಏನೇ ಆದರೂ ಕೂಡಾ ದೇಶದ ಪ್ರಮುಖ ಖಾಸಗಿ ಹಾಗೂ ಸಾರ್ವಜನಿಕ ವಲಯದ ಎರಡು ಬ್ಯಾಂಕ್‌ಗಳಲ್ಲಿ ಆದ ಈ ಬದಲಾವಣೆ ಸಾಲ ಪಡೆದವರ ಮೇಲೆ ಪ್ರಭಾವ ಉಂಟು ಮಾಡಲಾಗಿದೆ.

ಇಎಂಐ ಹೊರೆ ಹೆಚ್ಚಳ ಐಸಿಐಸಿಐ ಬ್ಯಾಂಕ್ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಮಾರ್ಜಿನಲ್ ಕಾಸ್ಟ್ ಬೇಸ್ಡ್ ಲೆಂಡಿಂಗ್ ರೇಟ್ ಅಥವಾ ಎಂಸಿಎಲ್‌ಆರ್ ಪರಿಷ್ಕರಣೆ ಮಾಡಿರುವುದು ಸಾಲವನ್ನು ಪಡೆದಿರುವ ಗ್ರಾಹಕರ ಮಾಸಿಕ ಇಎಂಐ ಮೇಲೆ ಪ್ರಭಾವ ಉಂಟು ಮಾಡಲಾಗಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ಸಾಲದ ಬಡ್ಡಿದರ ತೀರಾ ಅಧಿಕವಾಗಿದೆ. ಈಗ ಮತ್ತಷ್ಟು ಇಎಂಐ ಹೊರೆ ಹೆಚ್ಚಾಗಲಿದೆ. ಸಾಲದ ಬಡ್ಡಿದರ ಕಡಿಮೆ ಮಾಡಲಾಗಿದ್ದರೆ, ಇಎಂಐ ಹೊರೆ ಕಡಿಮೆಯಾಗಲಿದೆ. ಈ ನೂತನ ಬಡ್ಡಿದರವು ಜೂನ್ 1, 2023ರಿಂದ ಜಾರಿಗೆ ಬರಲಿದೆ.

**ಬಡ್ಡಿದರ ವಿವರ ಈ ಕೆಳಗಿದೆ :** ಐಸಿಐಸಿಐ ಬ್ಯಾಂಕಿನಲ್ಲಿ ಸಾಲದ ಬಡ್ಡಿದರ ಪರಿಷ್ಕರಣೆ ದೇಶದ ಪ್ರಮುಖ ಖಾಸಗಿ ವಲಯದ ಬ್ಯಾಂಕ್ ಆದ ಐಸಿಐಸಿಐ ಬ್ಯಾಂಕ್ ಒಂದು ಮತ್ತು ಮೂರು ತಿಂಗಳ ಅವಧಿಯಲ್ಲಿ ಎಂಸಿಎಲ್‌ಆರ್ ದರಗಳನ್ನು ಕಡಿತಗೊಳಿಸಿದೆ. ಒಂದು ತಿಂಗಳ ಅವಧಿಯ ಎಂಸಿಎಲ್‌ಆರ್ ಅನ್ನು ಶೇಕಡ 8.50ರಿಂದ ಶೇಕಡ 8.35ಕ್ಕೆ ಇಳಿಕೆ ಮಾಡಲಾಗಿದೆ. ಮೂರು ತಿಂಗಳ ಅವಧಿಯ ಎಂಸಿಎಲ್‌ಆರ್ 15 ಮೂಲಾಂಕ ಇಳಿಕೆ ಮಾಡಲಾಗಿದ್ದು ಶೇಕಡ 8.55ರಿಂದ ಶೇಕಡ 8.40ಕ್ಕೆ ತಲುಪಿದೆ. ಓವರ್‌ನೈಟ್ ಎಂಸಿಎಲ್‌ಆರ್ ಸ್ಥಿರವಾಗಿದೆ. ಆದರೆ ಆರು ತಿಂಗಳ ಹಾಗೂ ಒಂದು ವರ್ಷದ ಎಂಸಿಎಲ್‌ಆರ್ ಅನ್ನು ಹೆಚ್ಚಳ ಮಾಡಲಾಗಿದೆ. ಆರು ತಿಂಗಳ ಎಂಸಿಎಲ್‌ಆರ್ ಅನ್ನು 5 ಮೂಲಾಂಕ ಏರಿಸಲಾಗಿದ್ದು ದರವು ಶೇಕಡ 8.75ಕ್ಕೆ ತಲುಪಿದೆ. 1 ವರ್ಷದ ಎಂಸಿಎಲ್‌ಆರ್ ಅನ್ನು ಕೂಡಾ 5 ಬೇಸಿಸ್ ಪಾಯಿಂಟ್ ಹೆಚ್ಚಿಸಲಾಗಿದ್ದು ದರವು ಶೇಕಡ 8.85ಕ್ಕೆ ಏರಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ ಸಾಲದ ಬಡ್ಡಿದರ ಪರಿಷ್ಕರಣೆ ಸಾರ್ವಜನಿಕ ವಲಯದ ಪ್ರಮುಖ ಬ್ಯಾಂಕ್‌ಗಳಲ್ಲಿ ಒಂದಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಕೂಡಾ ತನ್ನ ಎಂಸಿಎಲ್‌ಆರ್ ಅನ್ನು ಎಲ್ಲ ಅವಧಿಗೆ ಹತ್ತು ಮೂಲಾಂಕ ಹೆಚ್ಚಳಗೊಳಿಸಿದೆ. ಪರಿಷ್ಕರಣೆಯ ಬಳಿಕ ಬ್ಯಾಂಕ್‌ನಲ್ಲಿ ಓವರ್‌ನೈಟ್ ಎಂಸಿಎಲ್‌ಆರ್ ಶೇಕಡ 8ರಿಂದ ಶೇಕಡ 8.10ಕ್ಕೆ ಏರಿಕೆಯಾಗಿದೆ. ಒಂದು ತಿಂಗಳು, ಮೂರು ತಿಂಗಳು ಮತ್ತು ಆರು ತಿಂಗಳ ಎಂಸಿಎಲ್‌ಆರ್ ಕೂಡಾ 10 ಮೂಲಾಂಕ ಏರಿಕೆ ಮಾಡಲಾಗಿದ್ದು ಕ್ರಮವಾಗಿ ಶೇಕಡ 8.20, ಶೇಕಡ 8.30, ಶೇಕಡ 8.50 ಆಗಿದೆ. ಒಂದು ವರ್ಷ ಹಾಗೂ ಮೂರು ವರ್ಷದ ಎಂಸಿಎಲ್‌ಆರ್ ಕ್ರಮವಾಗಿ ಶೇಕಡ 8.60 ಮತ್ತು ಶೇಕಡ 8.90 ಇದೆ. ಇನ್ನು ರೆಪೋ ಲಿಂಕ್ಡ್ ಲೆಂಡಿಂಗ್ ರೇಟ್ (ಆರ್‌ಎಲ್‌ಎಲ್‌ಆರ್) ಶೇಕಡ 8.75ರಿಂದ ಶೇಕಡ 9.00ಕ್ಕೆ ಏರಿಕೆಯಾಗಿದೆ.

**ಏನಿದು ಎಂಸಿಎಲ್‌ಆರ್? :** ಏಪ್ರಿಲ್ 1, 2016ರ ಬಳಿಕ ಎಲ್ಲ ಸಾಲದ ಬಡ್ಡಿದರವು ಮಾರ್ಜಿನಲ್ ಕಾಸ್ಟ್ ಬೇಸ್ಡ್ ಲೆಂಡಿಂಗ್ ರೇಟ್ ಅಥವಾ ಎಂಸಿಎಲ್‌ಆರ್ ಆಧಾರಿತವಾಗಿದೆ. ಹಣಕಾಸು ಸಂಸ್ಥೆಗಳು ವಿಧಿಸಬಹುದಾದ ಕನಿಷ್ಠ ಬಡ್ಡಿದರವೇ ಎಂಸಿಎಲ್‌ಆರ್ ಆಗಿದೆ. ಸಾಲಕ್ಕೆ ಎಷ್ಟು ಕನಿಷ್ಠ ಬಡ್ಡಿದರ ಎಂಬುವುದನ್ನು ಎಂಸಿಎಲ್‌ಆರ್ ಪ್ರತಿನಿಧಿಸುತ್ತದೆ.

## ಜಿಡಿಪಿ ಬೆಳವಣಿಗೆ ಶೇ.6.5 ಆರ್‌ಬಿಐ ಅಂದಾಜು




**ಮುಂಬಯಿ :** ರಿಸರ್ವ್ ಬ್ಯಾಂಕ್ ಆರ್‌ಬಿಐ ತನ್ನ ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿದ್ದು, 2023–24ರ ಹಣಕಾಸು ವರ್ಷದಲ್ಲಿ ಶೇ.6.5ರ ಜಿಡಿಪಿ ಬೆಳವಣಿಗೆಯನ್ನು ಅಂದಾಜು ಮಾಡಲಾಗಿದೆ. ತನ್ನ ವಾರ್ಷಿಕ ವರದಿಯಲ್ಲಿ ದೇಶದಲ್ಲಿ ಹಣದುಬ್ಬರದ ಅಪಾಯ ಪ್ರಸ್ತುತ ಕಡಿಮೆಯಾಗಿದೆ ಎಂದು ಆರ್‌ಬಿಐ ಹೇಳಿದೆ. 2023–24ರ ಹಣದುಬ್ಬರ ಮುನ್ಸೂಚನೆಯನ್ನು ಶೇ.5.2ರಲ್ಲಿ ಉಳಿಸಿಕೊಳ್ಳಲಾಗಿದೆ. ವರದಿಯ ಪ್ರಕಾರ, ಈ ವರ್ಷ ದೇಶದಲ್ಲಿ ಸಾಮಾನ್ಯ ಮುಂಗಾರು ಇದ್ದರೇ ಮತ್ತು ಎಲ್ ನಿನೋ ಅಪಾಯ ಇಲ್ಲದೇ ಹೋದರೇ, 2023–24ರಲ್ಲಿ ಹಣದುಬ್ಬರದ ಸಮಸ್ಯೆ ನಿವಾರಣೆಯಾಗಲಿದೆ. "ಆರ್ಥಿಕ ಹಿಂಜರಿತದಿಂದ ವಿಶ್ವದ ಪ್ರಮುಖ ದೇಶಗಳು ಸಂಕಷ್ಟಕ್ಕೆ ಸಿಲುಕಿವೆ. ಆದಾಗ್ಯೂ ಭಾರತ ತ್ವರಿತ ವೇಗದಲ್ಲಿ ಆರ್ಥಿಕವಾಗಿ ಮುನ್ನಡೆಯುತ್ತಿದೆ," ಎಂದು ಆರ್‌ಬಿಐ ಹೇಳಿದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಒಬ್ಬ ಗ್ರಾಹಕರಿಗೆ ರೂ.11ಲಕ್ಷ ಸಾಲ ಮಂಜೂರು ಮಾಡಿದ್ದೇವೆ. ಆತ ಕೋವಿಡ್‌ನಿಂದಾಗಿ ವ್ಯಾಪಾರದಲ್ಲಿ ತೊಂದರೆಯಾಗಿರುವುದರಿಂದ ಸಾಲವನ್ನು ಪುನರ್‌ರಚನೆ ಮಾಡಲು ಕೇಳಿಕೊಂಡಿದ್ದ. ಆತನ ಸಾಲವನ್ನು ಡಿಸೆಂಬರ್ 1, 2021 ರಂದು ಪುನರ್‌ರಚಿಸಿ ಕಂತನ್ನು ಎರಡು ವರ್ಷಗಳವರೆಗೆ ಮುಂದೂಡಲಾಗಿತ್ತು. ಬ್ಯಾಂಕು ಸಾಲದ ಶೇ.10ರಷ್ಟು ಅಂದರೆ ರೂ.1.16 ಲಕ್ಷ ಅನುವು ಮಾಡಿತ್ತು. ಗ್ರಾಹಕ ಪೂರ್ಣ ಸಾಲವನ್ನು ಮರುಪಾವತಿಸಿದ್ದು, ಬ್ಯಾಂಕು ಪುನರ್‌ರಚಿಸಿದ ಸಾಲಕ್ಕೆ ಮಾಡಿದ ರೂ.1.16ಲಕ್ಷ ಅನುವನ್ನು ಲಾಭ ನಷ್ಟದ ಖಾತೆಗೆ ವರ್ಗಾಯಿಸಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ :** ಗ್ರಾಹಕ ಪುನರ್‌ರಚಿಸಿದ ಸಾಲವನ್ನು ಮರುಪಾವತಿ ಮಾಡಿದ್ದರೆ, ಸಾಲಕ್ಕಾಗಿ ಮಾಡಿದ ಶೇ.10ರಷ್ಟರ ಅನುವನ್ನು ಭಾರತೀಯ ರಿಜರ್ವ್ ಬ್ಯಾಂಕಿನ ದಿನಾಂಕ ಮೇ 5, 2021ರ ಸುತ್ತೋಲೆಯ ಪ್ಯಾರ 20ರನ್ವಯ ಲಾಭ ನಷ್ಟ ಖಾತೆಗೆ ಲಾಭವೆಂದು ವರ್ಗಾಯಿಸಬಹುದು.

# ಪ್ಯಾನ್–ಆಧಾರ್ ಲಿಂಕ್‌ಗೆ ಜೂ.30 ಕೊನೆ ದಿನ 5 ಫೈನಾನ್ಷಿಯಲ್ ಟಾಸ್ಕ್‌ಗಳನ್ನು ಕೂಡಲೇ ಮುಗಿಸಿ




ಹೊಸದಿಲ್ಲಿ: ಜೂನ್ ತಿಂಗಳ ಆರಂಭದೊಂದಿಗೆ ಅನೇಕ ಹಣಕಾಸಿನ ಕಾರ್ಯಗಳ ಗಡುವು ಸಹ ಸಮೀಪಿಸುತ್ತಿದೆ. ಹೀಗಾಗಿ ಈ ತಿಂಗಳು ಮಾಡಲೇಬೇಕಿರುವ ಹಣಕಾಸು ಕಾರ್ಯಗಳ ಮಾಹಿತಿ ಇಲ್ಲಿದೆ. ಈ ಕೆಲಸವನ್ನು ಗಡುವಿನೊಳಗೆ ಮುಗಿಸದಿದ್ದರೆ, ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

1. **ಪ್ಯಾನ್–ಆಧಾರ್ ಲಿಂಕ್ ಡೆಡ್‌ಲೈನ್ :** ನೀವು ಇನ್ನೂ ಪ್ಯಾನ್ ಮತ್ತು ಆಧಾರ್ ಅನ್ನು ಲಿಂಕ್ ಮಾಡದಿದ್ದರೆ, ಜೂನ್ ತಿಂಗಳೊಳಗೆ ಈ ಕೆಲಸವನ್ನು ಪೂರ್ಣಗೊಳಿಸಿ. ಈ ಹಿಂದೆ ಪ್ಯಾನ್ – ಆಧಾರ್ ಲಿಂಕ್ ಮಾಡಲು 2023ರ ಮಾರ್ಚ್ 31 ಕೊನೆಯ ದಿನಾಂಕವಾಗಿತ್ತು. ನಂತರ ಇದನ್ನು 2023ರ ಜೂನ್ 30ಕ್ಕೆ ವಿಸ್ತರಿಸಲಾಗಿದೆ. ಗಮನಿಸಬೇಕಾದ ಅಂಶವೆಂದರೆ ಪ್ಯಾನ್ ಮತ್ತು ಆಧಾರ್ ಲಿಂಕ್ ಮಾಡದಿದ್ದರೆ ನಿಮ್ಮ ಪ್ಯಾನ್ ನಿಷ್ಕ್ರೀಯಗೊಳ್ಳುತ್ತದೆ. ಇದುವರೆಗೂ ನಿಮ್ಮ ಪ್ಯಾನ್‌ಕಾರ್ಡ್ ಅನ್ನು ಆಧಾರ್‌ಗೆ ಲಿಂಕ್ ಮಾಡದಿದ್ದರೆ ಇಂದೇ ಕೂಡಲೇ ಲಿಂಕ್ ಮಾಡಿ.
2. **ಹೆಚ್ಚುವರಿ ಪಿಂಚಣಿಗಾಗಿ ಅರ್ಜಿ ಸಲ್ಲಿಸಿ :** ಇಪಿಎಫ್‌ಒ ಪಿಂಚಣಿದಾರರಿಗೆ ಜೂನ್ ತಿಂಗಳು ಬಹಳ ಮುಖ್ಯ. ನೀವು ಇನ್ನೂ ಹೆಚ್ಚಿನ ಪಿಂಚಣಿಗಾಗಿ ಅರ್ಜಿ ಸಲ್ಲಿಸದಿದ್ದರೆ, 2022ರ ಜೂನ್ 26ರ ಗಡುವಿನೊಳಗೆ ಅರ್ಜಿ ಸಲ್ಲಿಸಬಹುದು. ಈ ಮೊದಲು, ಇಪಿಎಫ್‌ಒ ಹೆಚ್ಚುವರಿ ಪಿಂಚಣಿಗೆ ಅರ್ಜಿ ಸಲ್ಲಿಸಲು ಮೇ 3ರ ಗಡುವನ್ನು ನಿಗದಿಪಡಿಸಿತ್ತು. ನಂತರ ಇದನ್ನು ಜೂನ್ 26ಕ್ಕೆ ವಿಸ್ತರಿಸಲಾಗಿದೆ.
3. **ಉಚಿತ ಆಧಾರ್ ಅಪ್ಡೇಟ್‌ಗೆ ಅವಕಾಶ :** ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಆಧಾರ್ ಕಾರ್ಡ್ ಹೊಂದಿರುವವರಿಗೆ ಜೂನ್ 14 ರವರೆಗೆ ಉಚಿತವಾಗಿ ಆಧಾರ್ ಕಾರ್ಡ್ ಅಪ್ಡೇಟ್ ಮಾಡಲು ಅವಕಾಶ ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ನೀವು ಆಧಾರ್ ಅನ್ನು ಉಚಿತವಾಗಿ ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡುವ ಮೂಲಕ 50 ರೂಪಾಯಿ ಶುಲ್ಕ ಉಳಿಸಬಹುದು. 10 ವರ್ಷಗಳಿಂದ ಅಪ್‌ಡೇಟ್ ಮಾಡದವರಿಗೆ ಇದು ಅನ್ವಯ. ವಿಳಾಸವನ್ನಷ್ಟೇ ಇಲ್ಲಿ ಪರಿಷ್ಕರಿಸಬಹುದು. ಇತರ ಕಾರ್ಯಗಳಿಗೆ ಆಧಾರ್ ಕೇಂದ್ರಕ್ಕೆ ತೆರಳಬೇಕು.
4. **ಬ್ಯಾಂಕ್ ಲಾಕರ್ ಒಪ್ಪಂದ :** ಬ್ಯಾಂಕ್ ಲಾಕರ್ ನಿಯಮಗಳು ಬದಲಾಗಿದ್ದು, ಗ್ರಾಹಕರು ಬ್ಯಾಂಕ್‌ಗಳೊಂದಿಗೆ ಲಾಕರ್ ಒಪ್ಪಂದಕ್ಕೆ ಸಹಿ ಹಾಕಲು ರಿಸರ್ವ್ ಬ್ಯಾಂಕ್ ಡಿಸೆಂಬರ್ 31ರವರೆಗೆ ಸಮಯ ನೀಡಿದೆ. ಹೀಗಾಗಿ, ಬ್ಯಾಂಕ್‌ಗಳು ಜೂನ್ 30ರೊಳಗೆ ಶೇ.50ರಷ್ಟು ಗ್ರಾಹಕರಿಂದ ಲಾಕರ್ ಒಪ್ಪಂದದ ಸಹಿ ಪಡೆಯಬೇಕಿದೆ. ಅದೇ ಸಮಯದಲ್ಲಿ ಸೆಪ್ಟೆಂಬರ್ 30ರೊಳಗೆ ಶೇ.75ರಷ್ಟು ಲಾಕರ್ ಒಪ್ಪಂದದ ಸಹಿ ತೆಗೆದುಕೊಳ್ಳಬೇಕು. ಇಂತಹ ಪರಿಸ್ಥಿತಿಯಲ್ಲಿ ಎಸ್‌ಬಿಐ ತನ್ನ ಗ್ರಾಹಕರಿಗೆ ಒಪ್ಪಂದಕ್ಕೆ ಸಹಿ ಹಾಕುವಂತೆ ಪದೇ ಪದೆ ವಿನಂತಿಸುತ್ತಿದೆ. ನೀವು ಕೂಡ ಬ್ಯಾಂಕ್ ಲಾಕರ್ ಹೊಂದಿದ್ದರೆ, ಹೊಸ ಒಪ್ಪಂದಕ್ಕೆ ಸಹಿ ಹಾಕಬಹುದು.
5. **ಎಸ್‌ಬಿಐ ಲಾಕರ್ ಒಪ್ಪಂದ :** ನೀವು ಎಸ್‌ಬಿಐನ ವಿಶೇಷ ಎಫ್‌ಡಿ ಸ್ಕೀಮ್ ಎಸ್‌ಬಿಐ ಅಮೃತ್ ಕಲಶ ಯೋಜನೆಯ ಲಾಭವನ್ನು ಪಡೆಯಲು ಬಯಸಿದರೆ, ನಿಮಗೆ ಜೂನ್ 30ರವರೆಗೆ ಮಾತ್ರ ಸಮಯವಿದೆ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಸ್‌ನಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ಅಸಭ್ಯವಾಗಿ ವರ್ತಿಸಿದ ವ್ಯಕ್ತಿಯೊಬ್ಬನಿಗೆ, ಮಹಿಳೆ ಹಲವು ಬಾರಿ ಎಚ್ಚರಿಕೆ ನೀಡಿದ ಬಳಿಕವೂ ಆತ ಪದೇ ಪದೇ ಚುಡಾಯಿಸಲು ಪ್ರಯತ್ನಿಸಿದಕ್ಕೆ ಮಹಿಳೆಯೊಬ್ಬರು ಹಿಗ್ಗಾ ಮುಗ್ಗಾ ಥಳಿಸಿದ ಘಟನೆ ಕೆ.ಆರ್.ಪೇಟೆ ಬಸ್ ನಿಲ್ದಾಣದಲ್ಲಿ ನಡೆದಿದೆ.
- ಜಗಳೂರಿನ ಅಮರಭಾರತಿ ವಿದ್ಯಾಕೇಂದ್ರ ಶಾಲೆಯಲ್ಲಿ ಜವಾನರಾಗಿ ಕಾರ್ಯನಿರ್ವಹಿಸಿದ್ದ ದೇವೇಂದ್ರಪ್ಪ ಅವರು ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಪಡೆದು ಶಾಸಕರಾಗಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ.
- ರಾಜ್ಯದ ಪ್ರಮುಖ ದೇವಾಲಯಗಳಲ್ಲಿ ಒಂದಾದ ಹನೂರು ತಾಲೂಕಿನಲ್ಲಿರುವ ಮಲೆ ಮಹದೇಶ್ವರಸ್ವಾಮಿ ದೇವಾಲಯದ ಆನೆ ಉಮಾ ಮಹೇಶ್ವರಿ ಹೆಸರಿನಲ್ಲಿ 5 ಲಕ್ಷ ರೂಪಾಯಿ ಮೌಲ್ಯದ ವಿಮೆ ಮಾಡಿಸಲಾಗಿದ್ದು, ವರ್ಷಕ್ಕೆ ರೂ. 11 ಸಾವಿರವನ್ನು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ವಿಮೆಗೆ ಪಾವತಿಸಲಿದೆ.
- ಒಡಿಶಾದ ಬಾಲಸೋರ್ ಜಿಲ್ಲೆಯ ಬಹನಾಗಾ ರೈಲು ನಿಲ್ದಾಣದ ಬಳಿ ನಡೆದ ರೈಲಿನ ಭೀಕರ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 288ಕ್ಕೆ ಏರಿಕೆಯಾಗಿದ್ದರೆ, 900ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.
- ಜಾಗತಿಕ ಮಟ್ಟದಲ್ಲಿ ಏವಿಯನ್ ಇನ್‌ಫ್ಲೂಯೆಂಜಾ ಅಥವಾ ಹಕ್ಕಿಜ್ವರದ ಪ್ರಕರಣ ತೀವ್ರಗತಿಯಲ್ಲಿ ಉಲ್ಬಣಗೊಳ್ಳುತ್ತಿದ್ದು ಎಲ್ಲ ದೇಶಗಳು ಕೋಳಿಗಳಿಗೆ ಲಸಿಕೆ ಹಾಕಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.
- ಇಂಡಿಯಾನಾ ಆಪ್ಥಾಲ್ಮಿಕ್ಸ್ ಎಂಬ ಗುಜರಾತ್ ಮೂಲದ ಕಂಪನಿಯೊಂದು ಶ್ರೀಲಂಕಾದಲ್ಲಿ ಕಳಪೆ ಗುಣಮಟ್ಟದ ಕಣ್ಣಿನ ಡ್ರಾಪ್ಸ್‌ಗಳನ್ನು ಸರಬರಾಜು ಮಾಡಿರುವ ಪರಿಣಾಮ ಐ ಡ್ರಾಪ್ಸ್ ನಿಂದ ಅನೇಕ ಮಂದಿಗೆ ಕಣ್ಣಿನ ಸೋಂಕು ಕಾಣಿಸಿಕೊಂಡಿದೆ ಎಂದು ಶ್ರೀಲಂಕಾ ಸರ್ಕಾರ ಭಾರತ ಸರ್ಕಾರಕ್ಕೆ ನೀಡಿರುವ ದೂರಿನಲ್ಲಿ ತಿಳಿಸಿದೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ
ಸಂಪುಟ : 30 । ಸಂಚಿಕೆ : 07 । ಮೇ 24, 2023 । ಬುಧವಾರ । ಪುಟಗಳು : 8 । ಬೆಲೆ : 2/-
ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಶ್ರೀ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಎಂಟು ಸಚಿವರಿಂದ ಪ್ರಮಾಣ ವಚನ ಸ್ವೀಕಾರ
2 ಶೂನ್ಯಕ್ಕಿಂತಲೂ ಕೆಳಗಿಳಿದ ಸಗಟು ಹಣದುಬ್ಬರ
6 ಎಂ.ಸಿ.ಸಿ. ಬ್ಯಾಂಕಿನಲ್ಲಿ ಸಂಸ್ಥಾಪಕರ ದಿನಾಚರಣೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

**ಜನರ ಮೇಲೆ ಇದರ ಪರಿಣಾಮ ಅಲ್ಪ ಅಷ್ಟೆ :** ಆರ್.ಬಿ.ಐ. ರೂ. 2,000 ಮುಖಬೆಲೆಯ ಚಲಾವಣೆಯಿಂದ ಹಿಂಪಡೆದಿರುವುದಾಗಿಯೂ, ಆದರೆ ಚಲಾವಣೆಯಲ್ಲಿದ್ದ ಒಟ್ಟು ಕರೆನ್ಸಿಯಲ್ಲಿ ರೂ.2,000 ನೋಟುಗಳ ಪಾಲು ಕೇವಲ ಶೇ.10.8 ಮಾತ್ರ. ಅದರಲ್ಲೂ ಕಳೆದ ಮೂರು ವರ್ಷಗಳಿಂದ ಜನ ಸಾಮಾನ್ಯರು ಈ ನೋಟುಗಳನ್ನು ಕಂಡಿದ್ದೂ ಇಲ್ಲ, ಬಳಸಿದ್ದೂ ಇಲ್ಲ. ಒಟ್ಟಾರೆ ಜನರ ಮೇಲೆ ಇದರ ಪರಿಣಾಮ ಅಲ್ಪ ಅಷ್ಟೆ.

**▸▸ ರವಿಕುಮಾರ್ ಜಿ.ಆರ್., ಬಳ್ಳಾರಿ**

**ನಮ್ಮ ವಿತ್ತ ಸಚಿವರು ಮೌನಕ್ಕೆ ಜಾರಿದ್ದಾರೆ :** ದೇಶ ಆರ್ಥಿಕವಾಗಿ ಬಹಳ ಅಭಿವೃದ್ಧಿ ಸಾಧಿಸಿದೆ ಎಂದು ನಮ್ಮ ವಿತ್ತ ಸಚಿವರು ಮೇಲಿಂದ ಮೇಲೆ ಹೇಳುತ್ತಲೇ ಇದ್ದಾರೆ. ಆದರೂ, ರೂಪಾಯಿ ಮಾತ್ರ ಅಮೆರಿಕಾದ ಡಾಲರ್ ಎದುರು ಸತತವಾಗಿ ಕಳೆದ 9 ವರ್ಷಗಳಿಂದ ಮುಗ್ಗರಿಸುತಲ್ಲೇ ಇದೆ. ಈಗ ಡಾಲರ್ ಎದುರು ಶೇ.11ಕ್ಕಿಂತ ಹೆಚ್ಚು ಅಪಮೌಲ್ಯ ಕಂಡಿದೆ. ನಮ್ಮ ವಿತ್ತ ಸಚಿವರು ಮೌನಕ್ಕೆ ಜಾರಿದ್ದಾರೆ.

**▸▸ ವಿಟ್ಲ ಪಾಂಡುರಂಗಾಚಾರ್, ಉಡುಪಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.